<u>ಸಾಕ್ಷಿಯನ್ನು ದಿನಾಂಕಃ **05.03.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎನ್.ಎ ವಕೀಲರಿಂದ:</u>

ನನಗೆ ಆಂಗ್ಲ ಭಾಷೆ ಓದಲು, ಬರೆಯಲು ಮತ್ತು ಅರ್ಥ ಮಾಡಿಕೊಳ್ಳಲು ಬರುತ್ತದೆ. ವಾದಿ ತನ್ನ ವಾದಪತ್ರದ ಯಾವ ಕಂಡಿಕೆಯಲ್ಲಿ , ಏನು ಬರೆದಿದೆ ಎಂದು ನನಗೆ ಖಚಿತ ಮಾಹಿತಿ ಗೊತ್ತಿಲ್ಲ. ಸದರಿ ವಿಚಾರ ತಿಳಿಯದಿದ್ದರೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಹೇಳಿರುವ ವಿಚಾರಗಳು ಸುಳ್ಳು ಎಂದು ಯಾವ ಆಧಾರದ ಮೇಲೆ ಹೇಳಿದ್ದಿರಾ ಎಂದರೆ ಸಾಕ್ಷಿಯು ವಾದಿಯು ಅನುಭವದಲ್ಲಿಲ್ಲದ ಕಾರಣ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಈ ದಾವೆಯನ್ನು ಸರ್ವೆ ನಂ.2 ಕ್ಕೆ 1 ಎಕರೆಗೆ ಸಲ್ಲಿಸಿರುತ್ತಾರೆ. ಸದರಿ ಸರ್ವೆ ನಂ.2 ರ ಮೂಲ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಜಮೀನು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಸದರಿ ಜಮೀನಿನಲ್ಲಿ ಪ್ರತಿವಾದಿಗೆ 23 ಗುಂಟೆ ಮಂಜೂರಾಗಿದ್ದು, ಉಳಿದ ಇನ್ನಾರಿಗೆ ಆ ರೀತಿ ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 1992 ರಲ್ಲಿ ಪ್ರತಿವಾದಿಗಳಿಗೆ ಮಂಜೂರಾಗಿರುತ್ತದೆ. ಸದರಿ ಮಂಜೂರಾದ ಮೇಲೆ ಪ್ರತಿವಾದಿ ಸರ್ವೆ ಮಾಡಿಸಿ ಆಕಾರಬಂಧ ಮಾಡಿಸಿ ಹದ್ದು ಬಸ್ತು ಗುರುತು ಮಾಡಿಸಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಸರ್ಕಾರದವರು ಹದ್ದು ಬಸ್ತು ಮಾಡಿಸಿ ನೀಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಪ್ರತಿವಾದ ಪತ್ರದ ಆಸ್ತಿಯು 23 ಗುಂಟೆ ಅದರಲ್ಲಿ 10 ಗುಂಟೆ ಸೇರಿ ಬಗೈರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ ಎಂದು ಹೇಳಿರುತ್ತೇನೆ. ಸದರಿ ಆಸ್ತಿಯನ್ನು ಪ್ರತಿವಾದಿಗಳು ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಆ ರೀತಿ ಅರ್ಜಿ ಸಲ್ಲಿಸಿದ ಕುರಿತು ದಾಖಲೆಯನ್ನು ನನಗೆ ತೋರಿಸಿದ್ದರು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಮಂಜೂರಾದ ಜಮೀನಿಗಿಂತ 10 ಗುಂಟೆ ಹೆಚ್ಚಿಗೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನಿಗೆ ಹೊಂದಿಕೊಂಡಂತೆ ನನಗೆ ಯಾವುದೇ ಜಮೀನು ಇಲ್ಲ. ಸರ್ವೇ ನಂ.2 ರ 200-300 ಮೀ ಅಂತರದಲ್ಲಿ ನಮ್ಮ ಜಮೀನು ಇವೆ. ಸರ್ವೇ ನಂ.2 ರ ಪಹಣಿಯನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ಪರಿಶೀಲನೆ ಮಾಡಿದಂತೆ ಅದು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಪ್ರತಿವಾದಿಗಳು ಮನೆ ಕಟ್ಟಿದ ಕುರಿತು ಪರವಾನಗಿ ಪಡೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಮನೆಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ. ಪ್ರತಿವಾದಿಗಳು 20X20 ವಿಸ್ತೀರ್ಣಕ್ಕೆ ಮನೆ ಕಟ್ಟಿದ್ದಾರೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಸದರಿ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸದೇ ಇದ್ದರೂ

ಬರೆಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮಗೆ ಮಂಜೂರಾದ ಜಾಗದಲ್ಲಿ ಯಾವುದೇ ಮನೆ ಕಟ್ಟಿರುವುದಿಲ್ಲ ಮತ್ತು ಜಾನುವಾರಗಳನ್ನು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ. ಪ್ರತಿವಾದ ಪತ್ರದ ಆಸ್ತಿಯಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದು, ಉಳಿಕೆ ಸರ್ಕಾರಿ ಹಳ್ಳ ಇರುತ್ತದೆ. ದಾವಾ ಆಸ್ತಿ 1 ಎಕರೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಮತ್ತು ಅವರ ಕುಟುಂಬದವರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸ್ವಲ್ಪ ಭಾಗದಲ್ಲಿ ವಾದಿ ಮನೆ ಕಟ್ಟಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿ ಕಟ್ಟಿದ್ದ ಮನೆಯಲ್ಲಿ ಅವರು ಅಕ್ರಮವಾಗಿ ಸ್ವಾಧೀನಾನುಭವದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ಅಕ್ರಮ ಸ್ವಾಧೀನಾನುಭವದಲ್ಲಿರುವ ವಾದಿಯನ್ನು ಅಲ್ಲಿಂದ ಹೊರಹಾಕಲು ಪ್ರತಿವಾದಿಗಳು ಪರಯತ್ನ ಪಟ್ಟಿರುತ್ತಾರೆ. ಆ ಕುರಿತು ಪ್ರತಿವಾದಿಗಳು ಪೋಲಿಸರಿಗೆ ದೂರು ನೀಡಿರುತ್ತಾರೆ. ಸದರಿ ದೂರಿನ ಕುರಿತು ಕ್ರಮ ಕೈಗೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಕುರಿತು ಪ್ರತಿವಾದಿಗಳು ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ

ಸರಿಯಲ್ಲ. ವಾದಿ ದಾವಾ ಆಸ್ತಿಯನ್ನು ವಂಜೂರು ಮಾಡಿಕೊಡಬೇಕೆಂದು ಅಶಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರದು ಸರ್ವೇ ನಂ.2 ಬೋಳೆನಹಳ್ಳಿ ಗ್ರಾಮಕ್ಕೆ ಸಲ್ಲಿಸಿದ್ದು, ಸರ್ವೇ ನಂ.2/5 ಕ್ಕೆ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.2 ಪೋಡಿಯಾಗಿರುವುದಿಲ್ಲ. ಆ ರೀತಿ ಪೋಡಿಯಾಗದೇ ಇರುವ ಕಾರಣ ಸರ್ವೇ ನಂ.2/5 ಎಂದು ನಂಬರ್ ನೀಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿಯು ಸಲ್ಲಿಸಿರುವ ಅರ್ಜಿ ಮಂಜೂರಾತಿಗೆ ಬಾಕಿ ಇದ್ದು, ವಾದಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಾವಸಂದ್ರದಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಮತ್ತು ನಾನು ಒಂದೇ ರಾಜಕೀಯ ಗುಂಪುಗಳು ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತನ್ನ ತಂದೆಯ ಕಾಲದಿಂದಲೂ ಬೋಳೇನಹಳ್ಳಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ದೊಡ್ಡ ಮಾವತ್ತೂರು ಗ್ರಾಮದಲ್ಲಿ 2019 ರಿಂದ ಮತದಾನ ಮಾಡುತ್ತಿದ್ದಾರೆ. ವಾದಿಗೆ ದೊಡ್ಡ ಮಾವತ್ತೂರಿನಲ್ಲಿ ಯಾವುದೇ ಮನೆ ಇರುವುದಿಲ್ಲ. ದಾವಾ ಆಸ್ತಿಯಲ್ಲೇ ವಾದಿ ಸ್ವಾಧೀನಾನುಭವದಲ್ಲಿದ್ದುಕೊಂಡು ಮತದಾನ ಮಾಡುತ್ತಿದ್ದಾರೆ ಎಂದರೆ

ಸಾಕ್ಷಿಯು ಕೇವಲ ಮತದಾನ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿ ತೊಂದರೆ ಕೊಡುವ ಸಲುವಾಗಿ ಪ್ರತಿವಾದಿಗಳ ಜೊತೆ ಸೇರಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಅಂಗವಿಕರಲು ಎಂದರೆ ಸರಿ. ವಾದಿಯನ್ನು ದಾವಾ ಆಸ್ತಿಯಿಂದ ಹೊರಹಾಕಲು ಪ್ರತಿವಾದಿಗಳಿಯೊಂದಿಗೆ ಸೇರಿ ನಾನು ಪ್ರಯತ್ನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ**.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.